ತುಂಬಾ ಚೆನ್ನಾಗಿ ಓದುತ್ತಿದ್ದಾನೆಂದು ತಿಳಿದುಕೊಳ್ಳುತ್ತಾರೆ. ಇದರಿಂದ ದೊಡ್ಡ ಘೋರ ಅಪರಾಧವಾಗುತ್ತದೆಂದು ನಾನು ಸರ್ಕಾರವನ್ನು ಮುಂಚಿಯೇ ಎಚ್ಚರಿಸುತ್ತಿದ್ದೇನೆ. ಇದರಿಂದಾಗಿ ಗ್ರಾಮಾಂತರ ಪ್ರದೇಶದ ಮಕ್ಕಳ ವಿದ್ಯಾಭ್ಯಾಸ ಸರ್ವನಾಶವಾಗಿದೆ. ಪಾಸ್ ಬೇರೆ ಕೊಟ್ಟಿದ್ದೀರಿ. ಪಾಸ್ ಕೊಡಬಾರದು ಎಂದು ನಾನು ಹೇಳುತ್ತಿಲ್ಲ. ಅದಕ್ಕೆ ತಕ್ಕ ವ್ಯವಸ್ಥೆ ಕೂಡ ಮಾಡಬೇಕಲ್ಲ. ನಾವು ಹೋದ ಕಡೆಗಳಲ್ಲಿ ಹುಡುಗರು ಇದೇ ದೂರು ಹೇಳುತ್ತಾರೆ. ಹೆಂಗಸರು ಮಕ್ಕಳು ಒಂದು ಕಡೆ ದೂರು ಕೊಡುತ್ತಾರೆ. ಇನ್ನೊಂದು ಕಡೆ ಪಾಸ್ ಕೊಟ್ಟ ಹುಡುಗರ ದೂರು. ಇಷ್ಟೊಂದು ಆದ್ವಾನವಾಗಿರುವುದರಿಂದ ತಾವು ನಡೆಸಲಿಕ್ಕೆ ಇಲ್ಲೆಲ್ಲಿ ಸಾಧ್ಯ ಅಲ್ಲಿ ನಡೆಸಿ, ಎಲ್ಲೆಲ್ಲಿ ಸಾಧ್ಯವಿಲ್ಲ ಅಲ್ಲಿ ಪ್ರೈವೇಟ್‌ನವರಿಗೆ ಕೊಟ್ಟು ಏನಾದರೂ ವ್ಯವಸ್ಥೆ ಮಾಡುತ್ತೀರಾ ? ಸಾರ್ವಜನಿಕರ ಹಿತದೃಷ್ಟಿಯಿಂದ ಈ ಕಾರ್ಯಕ್ರಮದಲ್ಲಿ ಎಫಿಷಿಯನ್ಸಿ ಜಾಸ್ತಿ ಮಾಡುತ್ತೇವೆಂದು ಹೇಳಿದ್ದೀರಿ. ಇವತ್ತು ಗ್ರಾಮಾಂತರ ಪ್ರದೇಶದ ಪ್ರಯಾಣಿಕರಿಗೆ ನರಕವಾಗಿದೆ. ದಯವಿಟ್ಟು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ವಿವರಣೆ ಕೊಡಬೇಕು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಸಾರಿಗೆ ಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೇ ಶ್ರೀಮಾನ್ ಹನುಮೇಗೌಡರು ಹೇಳತಕ್ಕಂಥದ್ದು ಅನುಭವ ಮತ್ತು ನಿಜವಾದಂಥಹ ಅಂಶ. ಜನಗಳಿಗೆ ತುಂಬಾ ತೊಂದರೆ ಆಗಿದೆ. ಆ ದೃಷ್ಟಿಯಿಂದ ಇದನ್ನು ನಾವು ತೀವ್ರವಾಗಿ ಪರಿಶೀಲನೆ ಮಾಡುತ್ತೇವೆ. ಇದರಲ್ಲಿ ಪುನಃ ಕೆಲವು ಅಂಶಗಳನ್ನು ಅಧ್ಯಯನ ಮಾಡುವುದಕ್ಕೆ ಇಲಾಖೆಗೆ ಸೇರಿರತಕ್ಕಂಥ ಅಧಿಕಾರಿ ವರ್ಗದವರನ್ನು ಸೇರಿಸಿ ಅವರ ಅಭಿಪ್ರಾಯವನ್ನು ತೆಗೆದುಕೊಂಡು ಆದಷ್ಟು ಬೇಗ ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆ ಅವರು ಹೇಳಿದಂತೆ ಇದು ಬಹಳ ಗಂಭೀರವಾಗಿದೆ ಆದಷ್ಟು ಬೇಗ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ.

ದಿನಕರ್ ಸಮಿತಿ ವರದಿಯ ಅನುಷ್ಠಾನ

190 (348): ಶ್ರೀ ಆರ್. ದಯಾನಂದರಾವ್ (ಗಾಂಧಿನಗರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ನಗರದ ಸಂಚಾರವನ್ನು ಉತ್ತಮ ಪಡಿಸುವ ಬಗ್ಗೆ ಶ್ರೀ ದಿನಕರ್‌ರವರ ನೇತೃತ್ವದಲ್ಲಿ ರಚಿಸಲಾದ ಸಮಿತಿಯು ವರದಿಯನ್ನು ಕೊಟ್ಟಿದೆಯೆ ?

ಆ. ಹಾಗಿದ್ದಲ್ಲಿ, ಈ ವರದಿಯ ಮೇಲೆ ಸರ್ಕಾರ ಕೈಗೊಳ್ಳಬಹುದಾದ ಕ್ರಮವೇನು ?

ಇ. ಶಿಫಾರಸ್ಸಿನನ್ವಯ ಅನುಷ್ಠಾನಕ್ಕೊಳಪಡಿಸಬಹುದಾದ ಮೊಬಲಗು ?

ಈ. ಬೆಂಗಳೂರು ನಗರದಲ್ಲಿ ಸಂಚಾರ ತೊಂದರೆಗಳನ್ನು ಸುಧಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ವೀರಪ್ಪ ಮೊಯಲಿ (ಮುಖ್ಯಮಂತ್ರಿಗಳು):–

ಅ. ಸಮಿತಿ ಯಾವುದನ್ನೂ ರಚಿಸಿರುವುದಿಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಈ. ಬೆಂಗಳೂರು ನಗರ ಸಂಚಾರಿ ತೊಂದರೆಗಳನ್ನು ಉತ್ತಮಪಡಿಸಲು ಸರ್ಕಾರ ಹಲವು

ಇಲಾಖೆಗಳನ್ನು ಅಂದರೆ, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ, ಗೃಹ ಇಲಾಖೆ, ಕಾಮಗಾರಿ ಇಲಾಖೆ ಮತ್ತು ಇತರೆ ಒಳಪಡಿಸಿಕೊಂಡು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಮಹಾನಗರ ಪಾಲಿಕೆಗೆ ಫುಟ್‌ಪಾತ್‌ಗಳನ್ನು ಕ್ಯಾರೇಜ್ ವೇ (ವಾಹನಗಳ ರಸ್ತೆ) ಮಾಡುವ ಕಾಲಕ್ಕೆ ಅದರ ಅಗಲ ಸರ್ಕಾರದ ಅನುಮತಿ ಇಲ್ಲದೇ ಕಡಿಮೆ ಮಾಡಬಾರದೆಂದು ತಿಳಿಸಿದೆ.

ಗೃಹ ಇಲಾಖೆಯಲ್ಲಿ ಗೃಹ ಅಯುಕ್ತರನ್ನು ಅಧ್ಯಕ್ಷರನ್ನಾಗಿ ಮಾಡಿರುವ ಸಮಿತಿ ಈಗಾಗಲೇ ಸೆಂಟ್ರಲ್ ಟೆಲಿಗ್ರಾಫ್ ಕಛೇರಿಯಿಂದ ಚಾಲುಕ್ಯ ಹೋಟೆಲ್ ಹತ್ತಿರದಲ್ಲಿರುವ ವೃತ್ತದವರೆಗೆ ಈಗಾಗಲೇ ಪರಿವೀಕ್ಷಣೆ ಮಾಡಿ ಹಲವು ಶಿಫಾರಸ್ಸುಗಳನ್ನು ಮಾಡಿದೆ. ಅವುಗಳ ಪೈಕಿ 1993–94ನೇ ಸಾಲಿನಲ್ಲಿ ಸಾಕಷ್ಟು ಹಣ ಒದಗಿಸುವುದು. ಆ ಹಣವನ್ನು ಹಲವು ಉಪಕರಣಗಳಾದಂಥ ಬ್ರೇತ್ ಅನಲೈಸರ್ಸ್ ಸ್ಪೀಡ್ ರಾಡರ್ ಗನ್ಸ್, ಕಂಪ್ಯೂಟರ್ಸ್ ಮತ್ತು ಇತರೆಗಳನ್ನು ಒದಗಿಸುವುದು ಇದೂ ಇಲ್ಲದೆ ಹಲವು ವಾಹನಗಳನ್ನು, ಮೋಟಾರ್ ಸೈಕಲ್‌ಗಳನ್ನು ಒದಗಿಸುವುದು.

ಶ್ರೀ ಆರ್. ದಯಾನಂದರಾವ್:– ಮಾನ್ಯ ಅಧ್ಯಕ್ಷರೇ ಸರ್ಕಾರದ ಗೃಹ ಇಲಾಖೆ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದ್ದೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಮತ್ತೆ ಅದರಲ್ಲಿ ಸದಸ್ಯರು ಯಾರ್ಯಾರು ಇದ್ದಾರೆ. ಯಾವಾಗ ಸಮಿತಿ ರಚಿಸಿದ್ದೀರಿ. ಮತ್ತು ಅದರಲ್ಲಿ ವಿನಾದರೂ ಶಾಸಕರ ಅಭಿಪ್ರಾಯವನ್ನು ಪಡೆಯುತ್ತೀರಾ ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೇ ದಿನಕರ್‌ರವರು ಸಮಿತಿಯಲ್ಲಿ ಇರಲಿಲ್ಲ. ದಿನಕರ್‌ರವರು ಸ್ವತಃ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಇದು ಸರ್ಕಾರದ ಒಳಾಡಳಿತ ಇಲಾಖೆಯ ಆಯಕ್ತರು ಮತ್ತು ಕಾರ್ಯದರ್ಶಿಗಳ ನೇತೃತ್ವದಲ್ಲಿ ಸಮಿತಿ ರಚನೆ ಮಾಡಿ ಅವರು ಇದನ್ನು ತೀವ್ರವಾಗಿ ಪರಿಶೀಲನೆ ಮಾಡಿದ್ದಾರೆ. ಮತ್ತು ಕೆಲವು ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಸರ್ಕಾರ ಮತ್ತು ನಗರಪಾಲಿಕೆ ಎರಡೂ ಸಂಸ್ಥೆಗಳೂ ಸೇರಿ ಈ ಒಂದು ಸಮಸ್ಯೆ ಬಗೆಹರಿಸುವುದಕ್ಕೆ ತೀರ್ಮಾನ ಮಾಡಬೇಕು. ಅದರಿಂದ ಒಳಾಡಳಿತ ಇಲಾಖೆಯವರು ಇದರ ಸಂಬಂಧವಾಗಿ ಸೇರಿ ತೀವ್ರವಾಗಿ ಗಮನವನ್ನು ಕೊಟ್ಟಿದ್ದಾರೆ. ನಾವು ಈಗಾಗಲೇ ಉತ್ತರ ಕೊಟ್ಟಿರುವ ಹಾಗೆ ಅನೇಕ ಸ್ಥಳಗಳನ್ನು ಪರಿಶೀಲನೆ ಮಾಡಿದ್ದಾರೆ. ಈಗಾಗಲೇ ನಗರಪಾಲಿಕೆಯವರು ಫ್ಲೈ ಒವರ್ಸ್ ಕಟ್ಟಲು ನೂರು ಕೋಟಿ ರೂಪಾಯಿಗಳ ಒಂದು ಯೋಜನೆ ಮಾಡಿ ಇಟ್ಟುಕೊಂಡಿದ್ದಾರೆ. ಎರಡೂ ಇಲಾಖೆಗಳು ಸೇರಿ ನಗರದಲ್ಲಿರತಕ್ಕಂಥ ಟ್ರಾಫಿಕ್ ಸಮಸ್ಯೆ ಏನು ಇದೆ ಅದನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ.

ಶ್ರೀ ಆರ್ ದಯಾನಂದರಾವ್:– 1993–94ನೇ ಸಾಲಿಗೆ ಟ್ರಾಫಿಕ್ ಇಂಪ್ಲಿಮೆಂಟ್ ಮಾಡಲು ಎಷ್ಟು ಹಣ ಒದಗಿಸಿದ್ದೀರಿ ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಎ.ಕೆ. ಅನಂತಕೃಷ್ಣ:– ಈ ಸಮಿತಿಯಲ್ಲಿ ಸಾರ್ವಜನಿಕ ಪ್ರತಿನಿಧಿಗಳು ಯಾರಾದರೂ ಇದ್ದಾರೆಯೇ ?

ದಯವಿಟ್ಟು ಸಾರ್ವಜನಿಕ ಪ್ರತಿನಿಧಿಗಳನ್ನು ಸೇರಿಸಿ ಇಂಥಾ ವಿಷಯಗಳಲ್ಲಿ ಗಮನ ಕೊಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂಥ ಸಲಹೆ

ಬಹಳ ಉತ್ತಮವಾದುದು. ಆದನ್ನು ಪರಿಶೀಲಿಸಿ ನಗರದಲ್ಲಿರತಕ್ಕಂಥ ಎಲ್ಲಾ ಶಾಸನ–ಸಭಾ ಸದಸ್ಯರು, ಲೋಕಸಭಾ ಸದಸ್ಯರು, ಇವರನ್ನೆಲ್ಲಾ ಸೇರಿಸಿ, ತೀರ್ಮಾನ ಮಾಡುವ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಕೋಮು ಗಲಭೆಗಳಲ್ಲಿ ಮೃತರಾದವರ ಅವಲಂಬಿತರಿಗೆ ಉದ್ಯೋಗ

191 (768): ಶ್ರೀ ಎ.ಎಂ. ಹಿಂಡಸ್‌ಗೇರಿ (ಹುಬ್ಬಳ್ಳಿನಗರ)

ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ನಡೆದ ಮತೀಯ ಗಲಭೆಗಳಲ್ಲಿ ಮೃತಪಟ್ಟವರ ಅವಲಂಬಿತರಿಗೆ ನೌಕರಿ ಕೊಡುವ ಬಗ್ಗೆ ಸರ್ಕಾರವು ನಿರ್ಧರಿಸಿದೆಯೇ;

ಆ. ಹಾಗಿದ್ದಲ್ಲಿ, ಆದೇಶ ಹೊರಡಿಸಲಾಗಿದೆಯೇ ?

ಶ್ರೀ. ಎಂ. ವೀರಪ್ಪ ಮೊಯಲಿ (ಮುಖ್ಯಮಂತ್ರಿಗಳು):–

ಅ. ಹೌದು

ಆ. ಪರಿಶೀಲನೆಯಲ್ಲಿದೆ.

ಶ್ರೀ ಎ. ಎಂ. ಹಿಂಡಸ್‌ಗೇರಿ:– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ನಡೆದ ಮತೀಯ ಗಲಭೆಗಳಲ್ಲಿ ಮೃತಪಟ್ಟವರ ಅವಲಂಬಿತರಿಗೆ ನೌಕರಿ ಕೊಡುವ ಬಗ್ಗೆ ಸರ್ಕಾರ ನಿರ್ಧರಿಸಿದೆಯೇ ಎಂದು ಪ್ರಶ್ನೆ ಕೇಳಿದ್ದೆ. ''ಹೌದು'' ಎಂದು ಹೇಳಿದ್ದಾರೆ. ಆದೇ 2ನೇ ಪ್ರಶ್ನೆಗೆ ಈ ಬಗ್ಗೆ ಆದೇಶ ಹೊರಡಿಸಲಾಗಿದೆಯೇ ಎಂದು ಪ್ರಶ್ನೆ ಕೇಳಿದ್ದರೆ, ಪರಿಶೀಲಿಸಲಾಗುವುದು ಎಂದು ಹೇಳಿದ್ದಾರೆ. ಅದು ಕ್ಲಿಯರ್ ಆಗಲಿಲ್ಲ. ಎರಡನೆಯದು 1990–91ನೇ ಇಸವಿಯಲ್ಲಿ ಗಲಭೆಯಾದಂಥ ಕಾಲದಲ್ಲೂ ಮೃತದ ಸಂಬಂಧಪಟ್ಟವರಿಗೆ ನೌಕರಿಗೆ ಕೊಡುತ್ತೇವೆಂದು ಅಶ್ಯೂರೆನ್ಸ್ ಕೊಟ್ಟಿದ್ದರು. ಇನ್ನೂ ಜಾರಿಗೆ ಕೊಟ್ಟಿಲ್ಲ. ಅದಕ್ಕೋಸ್ಕರ ಒಂದು ನಿಗದಿತ ಸಮಯದಲ್ಲಿ ಜಾರಿ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಡುತ್ತೀರಾ ? Whether the direction has already been sent to the concerned D.Cs., and other officers?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ತಾತ್ವಿಕವಾಗಿ ಸರ್ಕಾರದವರು ನೌಕರಿ ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. 6–1–93ರ ಸಚಿವ ಸಂಪುಟದ ಸಭೆಯಲ್ಲಿ, ಮತೀಯ ಗಲಭೆಯಲ್ಲಿ ಮೃತ ಹೊಂದಿದವರ ಕುಟುಂಬದಲ್ಲಿ ಸಂಪಾದನೆ ಮಾಡುತ್ತಿರುವ ಸದಸ್ಯರು ಮೃತಪಟ್ಟರೆ ಅವರ ಕುಟುಂಬಕ್ಕೆ ಮತ್ತೆ ಬೇರೆ ಯಾವುದೇ ರೀತಿಯಲ್ಲಿ ಆದಾಯ ಇಲ್ಲದಿದ್ದಲ್ಲಿ ಅವರ ಅವಲಂಬಿತರಲ್ಲಿ ಒಬ್ಬರಿಗೆ ಸರ್ಕಾರಿ ನೌಕರಿ ಕೊಡಬಹುದೆಂದು ನಿರ್ಣಯವನ್ನು ತೆಗೆದುಕೊಳ್ಳಲಾಯಿತು. ಆದರಂತೆ ಒಳಾಡಳಿತ ಇಲಾಖೆಯವರು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಗೆ ಕರಡು ನಿಯಮಗಳನ್ನು ರೂಪಿಸುವಂತೆ ಹೇಳಿದೆ. ಕಾನೂನು ಮತ್ತು ಸಂಸದೀಯ ಇಲಾಖೆಯು ಇದರ ನಿಯಮಗಳನ್ನು ರೂಪಿಸಿ ಒಳಾಡಳಿತ ಇಲಾಖೆಗೆ 18–2–93ರಂದು ಹಿಂದಿರುಗಿಸಿರುತ್ತಾರೆ. ಅದು ಪರಿಶೀಲನೆಯಲ್ಲಿದೆ. ಈ ನಿಯಮಗಳನ್ನು ಜಾರಿ ಮಾಡಿದ ನಂತರ ಮತೀಯ ಗಲಭೆಗಳಲ್ಲಿ ಮೃತ ಪಟ್ಟವರ ಕುಟುಂಬದವರಿಗೆ ಸರ್ಕಾರಿ ನೌಕರಿ ಕೊಡುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು. ಅಂದರೆ ಈ ತಿಂಗಳು 18ನೇ ತಾರೀಖು ಒಳಾಡಳಿತ ಇಲಾಖೆಗೆ ಬಂದಿದೆ. ಅದು ಪರಿಶೀಲನೆಯಲ್ಲಿ ಇದೆ. ಆದಷ್ಟು ಬೇಗ ತೀರ್ಮಾನ ಮಾಡಿ ಸಂಬಂಧಪಟ್ಟ ಕುಟುಂಬದವರಿಗೆ ನೌಕರಿ ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ.